# ಭಗತ್ ಸಿಂಗ್

'ಸಾಮ್ರಾಜ್ಯವಾದ್ ಮುರ್ದಾಬಾದ್, ಇಂಕ್ವಿಲಾಬ್ ಜಿಂದಾಬಾದ್' – ಇವು ಭಗತ್ ಸಿಂಗ್ ನೇಣಿಗೇರುವ ಕ್ಷಣದ ನುಡಿಗಳು. ಅದಕ್ಕೂ ಮುನ್ನಾದಿನ ಪ್ರಾಣ್ ನಾಥ್ ಮೆಹ್ತಾ, ಭಗತ್ ಸಿಂಗ್ ಜೊತೆ ಒಂದು ಗಂಟೆ ಕಾಲ ಕಳೆಯಲೆಂದು ಬಂದಿದ್ದರು. ಅವರಿಂದ ಪಡೆದ ಲೆನಿನ್ ಜೀವನಚರಿತ್ರೆಯನ್ನು ಭಗತ್ ಸಂಪೂರ್ಣ ಓದುತ್ತಾನೆ. 'ದೇಶಕ್ಕೆ ನಿನ್ನ ಸಂದೇಶವೇನು' ಎಂದು ಪ್ರಶ್ನಿಸಿದ ಅವರಿಗೆ, 'ಸಾಮ್ರಾಜ್ಯವಾದ ನಾಶವಾಗಲಿ, ಕ್ರಾಂತಿ ಚಿರಾಯುವಾಗಲಿ' ಎನ್ನುತ್ತಾನೆ ಭಗತ್ ಸಿಂಗ್. ನಿನ್ನ ಅಂತಿಮ ಇಚ್ಛೆಯೇನು ಎಂಬ ಪ್ರಶ್ನೆಗೆ 'ಮತ್ತೆ ನನಗೆ ಜನ್ಮ ಲಭಿಸಲಿ ಮತ್ತು ಮಾತೃಭೂಮಿಗೆ ಇನ್ನೂ ಅಧಿಕವಾದ ಸೇವೆ ಸಲ್ಲಿಸಲು ಅವಕಾಶ ದೊರೆಯಲಿ' ಎಂದು ದೃಢವಾಗಿ ನುಡಿಯುತ್ತಾನೆ. ಪ್ರಶ್ನೆ ಕೇಳಿದ ಮೆಹ್ತಾ ಅವರ ಧ್ವನಿಯೇ ಅವನಿಗೆ ಬರಲಿರುವ ಸಾವನ್ನು ನೆನೆದು ಕಂಪಿಸಲಾರಂಭಿಸುತ್ತದೆ.

ಭಗತ್ ಸಿಂಗ್‌ನ ಕುಟುಂಬದಲ್ಲಿ ದೇಶಭಕ್ತಿ ತುಂಬಿ ತುಳುಕುತ್ತಿತ್ತು. ಪಂಜಾಬ್ ಪ್ರಾಂತಕ್ಕೆ ಸೇರಿದ್ದ ಅವನು ಪೂರ್ವಜರು ಪಾಕಿಸ್ತಾನದ ಬಂಗಾ ಎಂಬ ಪ್ರದೇಶದಲ್ಲಿ ನೆಲೆಸಿದ್ದರು. ಇವನ ತಾತ ಅರ್ಜುನ್ ಸಿಂಗ್ ಸಮಾಜಕ್ಕಾಗಿ ಬಾವಿಗಳನ್ನು ತೋಡಿಸಿ, ಪ್ರವಾಸಿಮಂದಿರಗಳನ್ನು ಕಟ್ಟಿಸಿದ್ದ. ಇವನ ಮೂವರು ಮಕ್ಕಳಲ್ಲಿ ಹಿರಿಯವ ಕಿಶನ್ ಸಿಂಗ್, ಭಗತ್ ಸಿಂಗ್ ಹುಟ್ಟಿದಾಗ ಲಾಹೋರ್ ಜೈಲಿನಲ್ಲಿದ್ದನು. ಚಿಕ್ಕಪ್ಪಂದಿರಾದ ಸ್ವರ್ಣ ಸಿಂಗ್ ಹಾಗೂ ಅಜಿತಸಿಂಗ್ ಭಗತ್ ಸಿಂಗ್ ಕೂಡ ಜೈಲಿನಲ್ಲಿ ಇರುತ್ತಾರೆ. ಹುಟ್ಟಿದ ಸಂದರ್ಭದಲ್ಲಿ ಜಾಮೀನು ಪಡೆದು ಹೊರಬರುತ್ತಾರೆ. ಆ ಮಗುವಿಗೆ ಭಗನ್ ವಾಲಾ ಅಂದರೆ ಅದೃಷ್ಟವಂತ ಎಂಬ ಹೆಸರನ್ನು ಇಡಲಾಗುತ್ತದೆ.

ಮತಧರ್ಮಗಳ ಬಗ್ಗೆ ಆಸಕ್ತಿಯಿಲ್ಲದ ಭಗತ್ ತನ್ನನ್ನು ದೇಶಭಕ್ತಿ ಪಂಥದವನು ಎಂದು ಭಾವಿಸಿಕೊಂಡಿದ್ದ. ಶಾಸನ ಸಭೆಯಲ್ಲಿ ಬಾಂಬ್ ಹಾಕಿದ ಅಪಾದನೆಯ ಮೇಲೆ ಜೈಲು ಸೇರುತ್ತಾನೆ. ಜೈಲಿನ ಮುಖ್ಯಾಧಿಕಾರಿ ಸರ್ದಾರ್ ಚತರ್ ಸಿಂಗ್ ಅವನ ಬಳಿ ಬಂದು, 'ಗಲ್ಲಿನ ನಂತರ ಬೇರೊಂದು ಜೀವನ ನಿನಗೆ ಆರಂಭವಾಗುತ್ತದೆ. ನಿನ್ನ ಅಂತ್ಯಕಾಲ ಸಮೀಪಿಸುತ್ತಿದೆ. ಈ ಕಡೆಯ ಗಳಿಗೆಗಳಲ್ಲಿ ನೀನು ಗುರುವಾಣಿಯ ಪಠಣ ಮಾಡು' ಎಂಬ ಮಾತನ್ನು ಹೇಳುತ್ತಾನೆ. ಈ ಮಾತನ್ನು ನಗುತ್ತಾ ನಿರಾಕರಿಸಿ, 'ಗುರುವಾದರೂ ನನ್ನನ್ನು ಕಂಡು ನಗುವುದಿಲ್ಲವೆ? ಇಡೀ ಜೀವನದಲ್ಲಿ ಇವನು ನನ್ನನ್ನು ನೆನೆಯದೆ ಈಗ ಕೊನೆಗಾಲದಲ್ಲಿ ಜೀವಭಯದಿಂದ ಪುಕ್ಕಲನಾದ ಇವನು ನನ್ನ ಮೊರೆಹೋಗಿದ್ದಾನೆ ಎಂದು ಅನ್ನುವನಲ್ಲವೇ. ಜನರು ನನ್ನನ್ನು ನಾಸ್ತಿಕನೆಂದು ದೂಷಿಸಲಿ, ಸಾವಿಗೆ ಹೆದರಿ ನಡುಗಿದ ಎಂದು ದೂಷಿಸದಿರಲಿ ಎನ್ನುತ್ತಾನೆ.

ರೌಲತ್ ಶಾಸನದ ವಿರುದ್ಧ ಹೋರಾಟ, ಜಲಿಯನ್ ವಾಲಾಬಾಗ್ ಪ್ರಕರಣದ ನಂತರ ಗಾಂಧೀಜಿ ನೇತೃತ್ವದಲ್ಲಿ 1920ರಲ್ಲಿ ಅಸಹಕಾರ ಚಳವಳಿ ಉಗಮವಾಯಿತು. ವಿದ್ಯಾರ್ಥಿಯಾಗಿದ್ದ ಭಗತ್ ಅದರಲ್ಲಿ ಭಾಗವಹಿಸಿದ್ದ. 1924ರಲ್ಲಿ ನಡೆದ ಒಂದು ವೈಯಕ್ತಿಕ ಘಟನೆಯಿಂದ ಮನೆ ಬಿಟ್ಟು ಹೋರಾಟದಲ್ಲಿ ಪೂರ್ಣ ತೊಡಗಿಸಿಕೊಳ್ಳುವಂತೆ ಮಾಡುತ್ತದೆ.

ಅವನ ಅಜ್ಜಿ ಮದುವೆ ಮಾಡಿಕೊಳ್ಳಬೇಕೆಂಬ ಒತ್ತಡ ಹಾಕುತ್ತಾಳೆ. ಆತ 'ಇದು ಮದುವೆಗೆ ಕಾಲವಲ್ಲ. ನನ್ನ ತನುಮನವನೆಲ್ಲಾ ದೇಶಕ್ಕೆ ಅರ್ಪಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ. ನಮ್ಮ ಇಡೀ ಕುಟುಂಬ ದೇಶಪ್ರೇಮದಿಂದ ತುಂಬಿದೆ. ಕೌಟುಂಬಿಕ ವ್ಯವಹಾರಗಳಿಗೆ ನಾನು ಬಂದಿಯಾವುದಿಲ್ಲ. ನನ್ನ ಜೀವನವನ್ನು ತಾಯ್ನಾಡಿಗಾಗಿ ಮೀಸಲಿಡುತ್ತೇನೆ. ನಿಮ್ಮ ಒತ್ತಾಯದ ಮದುವೆಯಿಂದ ಪಾರಾಗಲು ಈ ಊರನ್ನೇ ಬಿಟ್ಟು ಬೇರೆಡೆಗೆ ಹೋಗುತ್ತಿದ್ದೇನೆ' ಎಂದು ಪತ್ರ ಬರೆಯುತ್ತಾನೆ.

1926ರ ಮಾರ್ಚಿನಲ್ಲಿ 'ನೌಜವಾನ್ ಭಾರತ್ ಸಭಾ' ಎಂಬ ಸಂಘಟನೆ ರಚಿಸಿ ಕಾರ್ಯ ನಿರ್ವಹಿಸುತ್ತಾನೆ. ನಂತರ ಸಂಘಟನೆ, ಹೋರಾಟ, ಮಾರ್ಕ್ಸ್‌ವಾದಿ ಚಿಂತನೆಗಳು ತೀಕ್ಷ್ಣ ತಿರುವನ್ನು ಪಡೆಯುತ್ತವೆ.

ಬ್ರಿಟಿಷ್ ವೈಸರಾಯ್ ಲಾರ್ಡ್ ಇರ್ವಿನ್ ಬ್ರಿಟಿಷ್ ಸರ್ಕಾರದ ರಕ್ಷಣೆಗೆಂದು ಕೇಂದ್ರ ಶಾಸನ ಸಭೆಯಲ್ಲಿ ಸಾರ್ವಜನಿಕ ಹಿತರಕ್ಷಣಾ ಕಾಯ್ದೆಯೊಂದನ್ನು ಮಂಡಿಸಿ ಜಾರಿಗೆ ತರಲು ನಿರ್ಧರಿಸುತ್ತಾನೆ. ಆ ಸಂದರ್ಭದಲ್ಲಿ ಶಾಸನ ಸಭಾ ಸದಸ್ಯರ ಹಾಗೂ ದೇಶದ ಯುವಶಕ್ತಿಯ ಕಣ್ತೆರೆಸಲೆಂದೇ ಗ್ಯಾಲರಿಯಲ್ಲಿ ಸ್ನೇಹಿತ ಬಿ.ಕೆ. ದತ್ ಜೊತೆಯಲ್ಲಿ ಕುಳಿತಿದ್ದ ಭಗತ್ ಬಾಂಬ್ ಎಸೆಯುತ್ತಾನೆ. ಜನ ಗಾಬರಿಗೊಂಡಾಗ ಎರಡನೆಯ ಬಾಂಬನ್ನು ಒಗೆಯುತ್ತಾನೆ. ಇಬ್ಬರನ್ನೂ ಬಂಧಿಸಲಾಗುತ್ತದೆ. ಈ ಸಂದರ್ಭದಲ್ಲಿ ತಾವು ಸಿದ್ಧಪಡಿಸಿದ್ದ ಕರಪತ್ರಗಳನ್ನು ಸಭೆಯತ್ತ ತೂರಿ 'ಇಂಕ್ವಿಲಾಬ್ ಜಿಂದಾಬಾದ್, ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ' ಎಂದು ಕೂಗುತ್ತಾನೆ. ಭಗತ್‌ಗೆ ಮರಣದಂಡನೆ ತಪ್ಪಿಸಲು ಎರಡನೆಯ ಬಾಂಬ್ ಬಿ.ಕೆ. ದತ್ ಒಗೆದನೆಂದು ನ್ಯಾಯಾಲಯದಲ್ಲಿ ವಾದಿಸಲಾಗುತ್ತದೆ.

ಜೈಲುವಾಸದಲ್ಲಿ ಭಗತ್ ಸ್ವಲ್ಪವೂ ಧೃತಿಗೆಡಲಿಲ್ಲ. ಅಧ್ಯಯನಶೀಲನಾಗಿದ್ದ ಅವನು ಜೈಲಿನಲ್ಲಿ ಸಾಹಿತ್ಯ, ಸಮಾಜವಾದಿ ಚಿಂತನೆಗಳಿಗೆ ತೊಡಗಿದ್ದ. ಭಗತ್ ಸಿಂಗ್ ಮತ್ತ ಅವನ ಸಂಗಡಿಗರ ಬಲಿದಾನದಿಂದ ಜನಜಾಗೃತಿಯನ್ನು ತೀವ್ರಗೊಳಿಸಬೇಕೆಂಬ ಉದ್ದೇಶ ಫಲಿಸಿ ಎಲ್ಲೆಲ್ಲೂ ಪ್ರತಿಭಟನೆ ಆರಂಭವಾಗುತ್ತದೆ. ಹುತಾತ್ಮ ಭಗತ್ ಬರೆದ 'ನಾನೇಕೆ ನಾಸ್ತಿಕನಾಗಿದ್ದೇನೆ' ಎಂಬ ಲೇಖನ ಪ್ರಸಿದ್ಧವಾದದ್ದು. 'ಅಂಧಶ್ರದ್ಧೆಯಿಂದ ಸಿಗುವ ಭ್ರಾಮಕ ಬೆಂಬಲದ ಬದಲು ತರ್ಕದಿಂದ ಲಭಿಸುವ ನೈಜ ಬೆಂಬಲಕ್ಕಾಗಿ ನಾವಿಂದು ಹೋರಾಟ ಮಾಡಬೇಕಿದೆ. ನಾನು ನಾಸ್ತಿಕನಾಗಿರುವುದು ಇಂತಹ ತಾರ್ಕಿಕ ವಿವೇಚನೆಯಿಂದ' ಎಂದು ತನ್ನ ಧಾರ್ಮಿಕ ನಂಬಿಕೆಯ ಬಗ್ಗೆ ಬಗ್ಗೆ ಸ್ಪಷ್ಟವಾಗಿ ಹೇಳುತ್ತಾನೆ.

■ **ಅಮೃತಮತಿ**

## ಮಾತೇ ಮುತ್ತು

- ನಾಲಗೆ ಆತ್ಮದ ವೈರಿ. ತುಟಿಗಳು ಸುಮ್ಮನಿದ್ದಾಗ ಹೃದಯಕ್ಕೆ ನೂರಾರು ನಾಲಗೆಗಳಿರುತ್ತವೆ.

  —ರೂಮಿ

- ಸ್ಥಿರ ಚಿತ್ರವೇಕಿನ್ನು ಬರಲಿಲ್ಲ ತಾಯೇ? ಚಿತ್ತವನು ಮುತ್ತಿರುವುದೇಕಿನ್ನು ಮಾಯೆ?

  —ಕುವೆಂಪು

- ಹೊಟ್ಟೆಯ ಹಸಿವನ್ನು ಹೇಗಾದರೂ ನೀಗಿಸಬಹುದು. ಆದರೆ ಪ್ರೀತಿಯ ಹಸಿವನ್ನು ನೀಗಿಸುವುದು ಕಷ್ಟ.

  —ಮದರ್ ತೆರೆಸಾ

- ಅತ್ಯುತ್ತಮ ಗೆಳೆಯ ಮತ್ತು ಅತ್ಯಂತ ಕೆಟ್ಟ ವೈರಿ ಇಬ್ಬರೂ ನಿಮ್ಮೊಳಗೇ ಇದ್ದಾನೆ.

  —ಇಂಗ್ಲಿಷ್ ಗಾದೆ

- ಚಿತ್ರವೆಂದರೆ ಮೌನವಾಗಿರುವ ಕಾವ್ಯ. ಕಾವ್ಯವೆಂದರೆ, ಮಾತನಾಡುವ ಚಿತ್ರ.

  —ಪ್ಲುಟಾರ್ಕ್

- ಒಂದೋ ಓದಲು ಅರ್ಹವಾದದ್ದನ್ನು ಬರೆಯಿರಿ. ಇಲ್ಲವೇ ಬರೆಯುವುದಕ್ಕೆ ಅರ್ಹವಾದುದನ್ನು ಮಾಡಿರಿ.

  —ಬೆಂಜಮಿನ್ ಫ್ರಾಂಕ್ಲಿನ್

- ಅತ್ಯುತ್ತಮ ಆಡಳಿತ ಇರುವ ದೇಶದಲ್ಲಿ ಬಡತನ ಎನ್ನುವುದು ನಾಚಿಕೆಯ ಸಂಗತಿ. ಕೆಟ್ಟ ಆಡಳಿತ ಇರುವ ದೇಶದಲ್ಲಿ ಶ್ರೀಮಂತಿಕೆ ಎನ್ನುವುದು ನಾಚಿಕೆಯ ಸಂಗತಿ.

  —ಕನ್‌ಫ್ಯೂಶಿಯಸ್

- ಯಾವ ಕನ್ನಡಿಗನ ಮನೆಯಲ್ಲಿ ಕೆಲವಾದರೂ ಕನ್ನಡ ಕೃತಿಗಳಿಲ್ಲವೋ, ಅದು ಕನ್ನಡಿಗನ ಮನೆಯೇ ಎಂದು ಪ್ರಶ್ನಿಸುವಂತಾಗಬೇಕು.

  —ಕಮಲಾ ಹಂಪನಾ

- ನಾವು ಮಾಡುವ ಕಾರ್ಯವು ಕಾರಣಗಳ ಅನುರೂಪವಾಗಿರುತ್ತದೆ.

  —ಅನುಪಮಾ ನಿರಂಜನ